ಇಲಾಖೆ / ವಿಷಯ : DEPARTMENT / SUBJECT: ಕಂದಾಯ - ಪ್ರವಾಹ

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡ ಪ್ರಭ ದಿನಾಂಕ : DATE : 16/10/20

ಕನ್ನಡಪ್ರಭ
ಸಂಪಾದಕೀಯ

# ಕಲಬುರಗಿ, ವಿಜಯಪುರಕ್ಕೆ ಬೇಕು ಸರ್ಕಾರದ ತ್ವರಿತ ಸಹಾಯಹಸ್ತ

ಆಂಧ್ರಪ್ರದೇಶದ ಕರಾವಳಿಯಲ್ಲಿ ಉಂಟಾದ ವಾಯುಭಾರ ಕುಸಿತದಿಂದ ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲಿ ಕೆಲ ದಿನಗಳಿಂದ ಭಾರಿ ಮಳೆಯಾಗುತ್ತಿದೆ. ಬುಧವಾರ ಏಕಾಏಕಿ ಸುರಿದ ಮಹಾಮಳೆಯಿಂದ ಕಲಬುರಗಿ ಹಾಗೂ ವಿಜಯಪುರ ಜಿಲ್ಲೆಗಳ ಹಲವು ಭಾಗಗಳಲ್ಲಿ ಪ್ರವಾಹದ ಸ್ಥಿತಿ ತಲೆದೋರಿದೆ. ಈಗ ಮಳೆಯಬ್ಬರ ಕೊಂಚ ಕಡಿಮೆಯಾಗಿದ್ದರೂ ಅವಾಂತರಗಳು ನಿಂತಿಲ್ಲ. ಇದೀಗ ಉತ್ತರ ಕರ್ನಾಟಕದ ಜಿಲ್ಲೆಗಳು ಹಾಗೂ ಕರಾವಳಿ ಜಿಲ್ಲೆಗಳಲ್ಲೂ ಭಾರಿ ಮಳೆಯಾಗುವ ಮುನ್ಸೂಚನೆಗಳು ಬರುತ್ತಿವೆ. ವಾಡಿಕೆಯಂತೆ ಸೆಪ್ಟೆಂಬರ್ ಅಂತ್ಯಕ್ಕೆ ಮುಂಗಾರು ಮಳೆ ಮುಗಿಯಬೇಕಿತ್ತು. ಆದರೆ, ಕೆಲ ವರ್ಷಗಳಿಂದ ಹವಾಮಾನ ವೈಪರೀತ್ಯದಿಂದಾಗಿ ಮಳೆಯ ಹಂಚಿಕೆ ಭಾರಿ ಏರುಪೇರಾಗುತ್ತಿದೆ. ಈ ವರ್ಷ ಅಕ್ಟೋಬರ್ 15 ಆದರೂ ಮುಂಗಾರು ಮಾರುತಗಳು ದುರ್ಬಲವಾಗಿಲ್ಲ. ಇಷ್ಟೊತ್ತಿಗೆ ರಾಜ್ಯಕ್ಕೆ ಹಿಂಗಾರು ಪ್ರವೇಶಿಸಿ 15 ದಿನಗಳು ಕಳೆದಿರಬೇಕಿತ್ತು. ಹಿಂಗಾರಿನಲ್ಲಿ ಸುರಿಯುವ ಮಳೆಯ ಪ್ರಮಾಣ ಕಡಿಮೆ. ಮಳೆಯ ಈ ಚಕ್ರವನ್ನು ಆಧರಿಸಿಯೇ ರಾಜ್ಯದಲ್ಲಿ ಕೃಷಿ ಚಟುವಟಿಕೆಗಳು ನಡೆಯುತ್ತವೆ. ಆದರೆ, ವರ್ಷದಿಂದ ವರ್ಷಕ್ಕೆ ಇವೆಲ್ಲವೂ ಅಸ್ತವ್ಯಸ್ತವಾಗುತ್ತಾ ಸಾಗುತ್ತಿವೆ. ಈಗ ಮಳೆಗಾಲದ ಕೊನೆಯಲ್ಲಿ ಕಲಬುರಗಿ ಮತ್ತು ವಿಜಯಪುರ ಜಿಲ್ಲೆಗಳು ಪ್ರವಾಹದಿಂದ ವ್ಯಾಪಕ ನಷ್ಟ ಅನುಭವಿಸಿವೆ. ಎರಡು ದಶಕಗಳಲ್ಲೇ ಹೆಚ್ಚು ಎನ್ನಲಾದ ಈ ಮಳೆಯಲ್ಲಿ ಕಲಬುರಗಿ ನಗರ ಭಾಗಶಃ ಮುಳುಗಿದೆ. ಕಲ್ಯಾಣ ಕರ್ನಾಟಕದ ಎಲ್ಲ ನಗರಗಳ ಪೈಕಿ ಕಲಬುರಗಿ ದೊಡ್ಡ ನಗರ. ಇದು ಇಡೀ ಕಲ್ಯಾಣ ಕರ್ನಾಟಕ (ಹಳೆಯ ಹೈದರಾಬಾದ್ ಕರ್ನಾಟಕ)ಕ್ಕೆ ರಾಜಧಾನಿಯಿದ್ದಂತೆ.

**ದಿಢೀರ್ ಸುರಿದ ಮಹಾಮಳೆಯಿಂದ ಕಲ್ಯಾಣ ಕರ್ನಾಟಕದ ಎರಡು ಜಿಲ್ಲೆಗಳ ಲಕ್ಷಾಂತರ ಜನರ ಬದುಕು ಪ್ರವಾಹದಲ್ಲಿ ಕೊಚ್ಚಿಹೋಗಿದೆ.**

ಭಾರಿ ಮಳೆಯಿಂದಾಗಿ ಕಲಬುರಗಿ ನಗರದಲ್ಲಿ ನೂರಾರು ಮನೆಗಳು ಹಾಗೂ ಜಿಲ್ಲೆಯ ಸಾವಿರಾರು ಮನೆ ಮತ್ತು ಕೃಷಿ ಭೂಮಿಗೆ ನೀರು ನುಗ್ಗಿದೆ. ಕುಟುಂಬದ ಸದಸ್ಯರು, ಜಾನುವಾರುಗಳು ಮತ್ತು ಬೆಳೆಯನ್ನು ರಕ್ಷಿಸಿಕೊಳ್ಳಲು ಜನರು ಹರಸಾಹಸಪಟ್ಟಿದ್ದಾರೆ. ಬೀದರ್ ನಗರ ಕೂಡ ಮಳೆಯ ಅಬ್ಬರಕ್ಕೆ ತತ್ತರಿಸಿದೆ. ಇತ್ತ ಆಂಧ್ರದಂತೆ ಮಹಾರಾಷ್ಟ್ರದಲ್ಲೂ ವ್ಯಾಪಕ ಮಳೆಯಾಗುತ್ತಿದ್ದು, ಅಲ್ಲಿನ ಅಣೆಕಟ್ಟೆಗಳಿಂದ ದೊಡ್ಡ ಪ್ರಮಾಣದಲ್ಲಿ ನೀರು ಬಿಡಲಾಗಿದೆ. ಹೀಗಾಗಿ ರಾಜ್ಯದ ಭೀಮಾ, ಘಟಪ್ರಭಾ, ಮಲಪ್ರಭಾ ಮತ್ತು ಕೃಷ್ಣಾ ನದಿಗಳ ತೀರದ ಜನರಿಗೆ ಪ್ರವಾಹದ ಸಮಸ್ಯೆ ತಲೆದೋರಿದೆ. ಮಹಾರಾಷ್ಟ್ರದಿಂದ ಬರುವ ನೀರು ಕಲಬುರಗಿ, ವಿಜಯಪುರವಷ್ಟೇ ಅಲ್ಲ, ಬಾಗಲಕೋಟೆ, ಬೆಳಗಾವಿ ಜಿಲ್ಲೆಗಳಲ್ಲೂ ಪ್ರವಾಹವನ್ನು ಸೃಷ್ಟಿಸುತ್ತದೆ. ವಿಜಯಪುರ, ಕಲಬುರಗಿ, ಕೊಪ್ಪಳ, ಯಾದಗಿರಿ ಹಾಗೂ ಬೀದರ್ ಜಿಲ್ಲೆಗಳಿಂದ ಮಳೆಯ ಅವಾಂತರಕ್ಕೆ ಸಿಲುಕಿದವರ ಲೆಕ್ಕವಿಲ್ಲದಷ್ಟು ಕರುಣಾಜನಕ ಕತೆಗಳು ಹೊರಬರುತ್ತಿವೆ. ಕೊರೋನಾ ಸಮಸ್ಯೆಯ ನಡುವೆ ಈ ವರ್ಷ ಬಿಟ್ಟು-ಬಿಟ್ಟು ಮೂರ್ನಾಲ್ಕು ಬಾರಿ ಕಾಡಿದ ದಿಢೀರ್ ಮಳೆ-ನೆರೆ ಸಮಸ್ಯೆ ಜನರನ್ನು ಕಂಗಾಲಾಗಿಸಿದೆ. ಇವರ ನೆರವಿಗೆ ತಕ್ಷಣ ಧಾವಿಸಲು ಸಾಧ್ಯವಿರುವುದು ಸರ್ಕಾರಕ್ಕೆ ಮಾತ್ರ. ಈ ಜಿಲ್ಲೆಗಳ ಆಡಳಿತ ಯಂತ್ರ ತಕ್ಷಣ ಕಾರ್ಯಪ್ರವೃತ್ತವಾಗಿದೆಯಾದರೂ ಸರ್ಕಾರ ಇನ್ನಷ್ಟು ನೆರವಿನ ಹಸ್ತ ಚಾಚುವ ಮೂಲಕ ಪ್ರವಾಹ ಸಂತ್ರಸ್ತರ ಕಷ್ಟಗಳನ್ನು ಸಾಧ್ಯವಾದಷ್ಟು ಕಡಿಮೆ ಮಾಡಲು ಯತ್ನಿಸಬೇಕಿದೆ.

ಉತ್ತರ ಕರ್ನಾಟಕ ಮತ್ತು ಕಲ್ಯಾಣ ಕರ್ನಾಟಕದ ಭೂ ರಚನೆಯೇ ಪ್ರವಾಹಕ್ಕೆ ಬೇಗ ತತ್ತರಿಸುವ ರೀತಿಯಲ್ಲಿದೆ. ಇಲ್ಲಿರುವ ಹತ್ತಾರು ಹಳ್ಳಗಳು ಒಂದೆರಡು ದೊಡ್ಡ ಮಳೆಗೇ ತುಂಬಿ ಹರಿಯತೊಡಗುತ್ತವೆ. ಈಗಂತೂ ಹಳ್ಳ ಹಾಗೂ ನದಿಗಳ ಪಕ್ಕ ಒತ್ತುವರಿ ಹೆಚ್ಚಿರುವುದರಿಂದ ಮತ್ತು ಜಿಲ್ಲಾ ಕೇಂದ್ರದ ನಗರಗಳು ಅನಿಯಂತ್ರಿತವಾಗಿ ಬೆಳೆದಿರುವುದರಿಂದ ಮಳೆಹಾನಿ ವರ್ಷದಿಂದ ವರ್ಷಕ್ಕೆ ತೀವ್ರವಾಗುತ್ತಿದೆ. ಅದರಲ್ಲೂ ಈ ವರ್ಷ ರಾಜ್ಯದಲ್ಲಿ ಒಟ್ಟಾರೆ ಶೇ.27ರಷ್ಟು ಜಾಸ್ತಿ ಮಳೆಯಾಗಿದೆ ಎಂದು ಅಂಕಿಅಂಶಗಳು ಹೇಳುತ್ತಿವೆ. ತಕ್ಷಣದ ಪರಿಹಾರ ಕಾರ್ಯಗಳನ್ನು ಕೈಗೊಳ್ಳುವುದರ ಜೊತೆಗೆ ನಾಶವಾದ ಬೆಳೆ, ಮನೆಗಳ ಸಮೀಕ್ಷೆ ಮತ್ತು ಸಾವಿನಿಂದ ನೊಂದವರ ಕುಟುಂಬಗಳಿಗೆ ಪರಿಹಾರ ನೀಡುವ ಕಾರ್ಯವನ್ನೂ ಜಿಲ್ಲಾಡಳಿತ ಮತ್ತು ರಾಜ್ಯ ಸರ್ಕಾರ ವಿಳಂಬವಿಲ್ಲದೆ ಮಾಡಬೇಕಿದೆ. ಮಹಾರಾಷ್ಟ್ರದಲ್ಲಿ ಈಗಲೂ ವ್ಯಾಪಕ ಮಳೆಯಾಗುತ್ತಿರುವುದರಿಂದ ಅಲ್ಲಿನ ಅಣೆಕಟ್ಟೆಗಳಿಂದ ಇನ್ನೂ ಭಾರಿ ಪ್ರಮಾಣದಲ್ಲಿ ನೀರು ಬಿಡುವ ಸಾಧ್ಯತೆಯಿದ್ದು, ಸಂಬಂಧಪಟ್ಟ ಜಿಲ್ಲಾಡಳಿತಗಳು ಎಲ್ಲಾ ಮುನ್ನೆಚ್ಚರಿಕೆ ವಹಿಸಬೇಕಿದೆ.